ಆದರೆ ಅವನ ಬೇಟೆಗೆ ಬೇರೆ ಜನ ಕಾಯ್ತಾ ಇದ್ದಾರೆ. ಅಂದ್ರೆ, ಅವನಿಗೆ ಅಪಾಯ ತಪ್ಪಿದ್ದಲ್ಲ. ಈ ದಿಣ್ಣೆ ಸುರಕ್ಷಿತವಲ್ಲ ಅಂದಿದ್ದೆ. ಆತ ನನ್ನ ಮಾತು ಕೇಳಿಸಿಕೊಂಡಿಲ್ಲ'

'ಸರಿ, ಒಳ್ಳೆಯ ಕೆಲಸ ಮಾಡಿದೆ. ಇನ್ನು ಉಳಿದದ್ದು ನನಗೆ ಬಿಟ್ಟು ಬಿಡು. ನಾನು ವಿಚಾರಿಸ್ತೀನಿ. ಸ್ವಲ್ಪ ಹೊತ್ತು ನನ್ನ ಜೊತೆಗೆ ಬಾ. ನನ್ನ ಕೆಲವು ಪ್ರಶ್ನೆಗಳಿಗೆ ನೀನು ಸಮರ್ಪಕ ಉತ್ತರ ಕೊಡ್ಬೇಕು' ಆಣತಿಯೆನ್ನುವಂತೆ ಪಾಂಬುವನ್ನು ಕರೆದ.

'ಪಿಸಿ, ನೀನು ಇಲ್ಲೇ ಇರು. ನಾನು ಆ ಸಮುದ್ರದ ನೀರಿನವರೆಗೂ ಹೋಗಿ ಬರುತ್ತೇನೆ' ಫೈಲನ್ನು ಪಿಸಿಯ ಕೈಯಲ್ಲಿಡುತ್ತಾ ಪಾಂಬುವಿನ ಜೊತೆಗೆ ಹೆಜ್ಜೆ ಹಾಕಿದ ಅಧಿಕಾರಿ.

ಪಿಸಿ ಸಾರಂಗನಿಗೆ ಒಳಗೊಳಗೆ ತಕತಕ. ಪಾಂಬು ಎಲ್ಲವನ್ನೂ ಅಧಿಕಾರಿಗೆ ತಿಳಿಸಿದರೆ ಸಾಣೆ ಹಿಡಿಸುವ ತನ್ನ ಮೆದುಳಿಗೆ ಬರುವ ಆಲೋಚನೆಗಳೆಲ್ಲ ತುಕ್ಕು ಹಿಡಿದಂತೆ. ಮರಳು ದಿಣ್ಣೆ ತನಗೆ ಯಾವುದೇ ಸಾಧನೆಗೆ ಪೂರಕವಲ್ಲದ್ದು. ನಿರಾಸೆ ತುಂಬಿತು. ನಿಧಾನಕ್ಕೆ ನಡೆದು ಕತ್ತಲಲ್ಲಿಯೇ ರಸ್ತೆಯ ಅಂಚನ್ನು ಹಿಡಿದು ಸಾಗಿದ. ಲೈಟ್ ಹೌಸ್‌ನ ಬೆಳಕು ವಿಶಾಲ ಸಾಗರದ ಮೇಲೆ ಹಾಲು ಚೆಲ್ಲಿದಂತೆ ಬಿದ್ದು ಪ್ರತಿಫಲಿಸುತಿತ್ತು.

ಪಾಂಬು ಮತ್ತು ಇನ್ಸ್‌ಪೆಕ್ಟರ್ ರಾಜಧಾನಿ ಸಮುದ್ರದ ಕಡೆಗೆ ನಡೆಯುತ್ತಿರುವುದು ಅಸ್ಪಷ್ಟವಾಗಿ ಕಾಣಿಸುತಿತ್ತು. ಸಾರಂಗ ಸಂಪೂರ್ಣ ರಸ್ತೆಯ ಮೇಲೆ ಬಂದ. ಎದುರಿಗೆ ಸ್ಯಾಂಟ್ರೋ ಕಾರು ನಿಂತಿತ್ತು. ಅದನ್ನು ದಾಟಿ ಅಧಿಕಾರಿ ನಿಲ್ಲಿಸಿದ ಪಲ್ಸರ್‌ನತ್ತ ನಡೆದ. ಫೈಲನ್ನು ಗಾಡಿಯ ಮೇಲಿರಿಸಿ ಮೈನ್ ಸ್ಟ್ಯಾಂಡ್ ಹಾಕಿದ ಗಾಡಿಯ ಮೇಲೆ ಕುಳಿತ. ಸಮುದ್ರ ದಂಡೆಯಿಂದ ಗಾಳಿ ತಂಪಾಗಿ ಬೀಸುತ್ತಿತ್ತು. ಆ ಕ್ಷಣಕ್ಕೆ ಹಿತವೆನಿಸಿತು. ಅವನು ತಲೆ ಕೆರೆದುಕೊಂಡ. ಅಧಿಕಾರಿಗೆ ಎಲ್ಲಾ ಮಾಹಿತಿಗಳು ದೊರಕುತ್ತವೆ. ಅಲ್ಲಿಗೆ ಲಹರಿಯ ಕೇಸು ಮುಗಿಯುತ್ತದೆ. ಅಧಿಕಾರಿಗೆ ಪ್ರಮೋಷನ್! ತನಗೆ ಮತ್ತೆ ವರ್ಗಾವಣೆ? ಏನೋ ಆಲೋಚಿಸಿದವನೆ ಫೈಲ್ ಹಿಡಿದುಕೊಂಡು ಮತ್ತೆ ರಸ್ತೆಯಲ್ಲಿ ಕಾಲೂರಿ ಮುಂದುವರಿದ. ಸ್ವಲ್ಪ ಹೊತ್ತಿನಲ್ಲಿಯೇ ಸಮುದ್ರದ ದಂಡೆಯಿಂದ ಎತ್ತರದ ದನಿಯಲ್ಲಿ ಮಾತುಗಳು ಕೇಳಿಸುತ್ತಿದ್ದವು. ಅದು ತನ್ನ ಅಧಿಕಾರಿ ಮತ್ತು ಪಾಂಬುವಿನ ದನಿಯೆನ್ನುವುದು ಸ್ಪಷ್ಟವಾಗಿತ್ತು. ಅವರು ಬರುವುದರೊಳಗೆ ಅವನು ಪಾಂಬುವಿನ ಸ್ಯಾಂಟ್ರೋ ನಿಂತಿದ್ದ ಸ್ಥಳಕ್ಕೆ ಬಂದ. ಒಮ್ಮೆ ಕಾರಿನ ಸುತ್ತಲೂ ಕಣ್ಣಾಡಿಸಿದ. ಕಿಸೆಯಿಂದ ಮೊಬೈಲ್ ತೆಗೆದು ಟಿಂಟ್ ಇಲ್ಲದ ಕಾರಿನ ಗಾಜಿನ ಮೂಲಕ ಬೆಳಕು ಹರಿಸಿದ. ಕಾರಿನ ಒಳಗೊಬ್ಬ ಉಸಿರಾಡದವರಂತೆ ಹಿಂದಿನ ಸೀಟಿನಲ್ಲಿ ಕುಳಿತಿದ್ದ! ಪಿಸಿ ತತ್ಕ್ಷಣವೆ ಕಾರಿನ ಬಾಗಿಲು ತೆರೆದ.

'ಯಾರದು?' ಅಂದ.

ಒಳಗಿದ್ದ ವ್ಯಕ್ತಿ ಕಾರಿನಿಂದ ತಕ್ಷಣವೆ ಜಿಗಿದು, ಪಿಸಿಯನ್ನು ದೂಡಿಕೊಂಡಂತೆ ಟಾರು ರಸ್ತೆಯಲ್ಲಿ ಓಟಕ್ಕಿತ್ತ!

* * *

ಪಿಸಿ ಸ್ವಲ್ಪ ದೂರ ಅವನನ್ನು ಹಿಂಬಾಲಿಸಿಕೊಂಡು ಓಡಿದ. ಆ ಓಟ ಮೊಲದ ಹಿಂದೆ ಆಮೆಯ ಓಟದಂತಿತ್ತು. ತನಗೆ ಬೇಕಾದ ಮಾಹಿತಿ ಓಟ ಕಿತ್ತ ವ್ಯಕ್ತಿಯಲ್ಲಿದೆ. ಸ್ಪಷ್ಟಪಡಿಸಿಕೊಂಡ ಪತ್ತೇದಾರನ ಮುಖದಲ್ಲಿ ತೆಳು ನಗೆಯೊಂದು ಮೂಡಿತು. ಈ ವಿಷಯ ಗೌಪ್ಯವಾಗಿರಬೇಕು. ಪಾಂಬುವಿನ ಜೊತೆಗಿದ್ದ ವ್ಯಕ್ತಿ ಯಾರೆನ್ನುವುದನ್ನು ತಿಳಿದುಕೊಳ್ಳಬೇಕು. ಅದೇ ವ್ಯಕ್ತಿಯ ಬಗ್ಗೆ ಅವರಿಬ್ಬರೂ ಮಾತಾಡಿಕೊಂಡಿರುವುದಾದರೆ ಪಾಂಬು ತನಗೆ ಮಾಹಿತಿ ಕೊಡುವುದರಲ್ಲಿ ಸಂದೇಹವಿಲ್ಲ. ಪಿಸಿ ಹಿಂದಕ್ಕೆ ಹೊರಳಿದ. ಓಟ ಕಿತ್ತ ವ್ಯಕ್ತಿಯ ಯಾವ ಕುರುಹುಗಳು ಸ್ಪಷ್ಟವಾಗಿ ಕಾಣಿಸಲಿಲ್ಲ ಅವನಿಗೆ. ಆತನ ಎತ್ತರವೊಂದನ್ನು ಮಾತ್ರ ನೆನಪಿಸಿಕೊಳ್ಳಬಹುದು. ಆತ ಶಕ್ತಿವಂತನಲ್ಲವೆನ್ನುವುದು ಆತ ಓಟಕ್ಕಿತ್ತಾಗಲೇ ತಿಳಿದಿತ್ತು ಸಾರಂಗನಿಗೆ.

ಪಿಸಿ ಕಾರಿನ ಕಡೆಯಿಂದ ಹೋಗದೆ ಮರಳು ದಿಣ್ಣೆಯ ಕಡೆಯಿಂದಲೇ ಬೈಕಿನತ್ತ ನಡೆದ. ಇನ್ಸ್‌ಪೆಕ್ಟರ್ ರಾಜಧಾನಿ ಬೈಕ್‌ನ ಬಳಿ ಬಂದು ಕೂಗಿದ್ದು ಕೇಳಿಸಿತು. ಪಿಸಿ ದಾಪುಗಾಲು ಹಾಕಿದ. ಅವನ ಕಣ್ಣುಗಳು ಕಾರಿನತ್ತ ತಿರುಗಿದವು. ಪಾಂಬು ಈಗ ಆ ವ್ಯಕ್ತಿಯನ್ನು ಹುಡುಕಾಡುತ್ತಾನೆ. ಅಥವಾ ಆ ವ್ಯಕ್ತಿ ಮತ್ತೆ ಪಾಂಬುವಿನ ಕಾರಿನತ್ತ ಬರುತ್ತಾನೆ. ಇದೇ ಸಕಾಲ. ಈ ಮಾಹಿತಿಯನ್ನು ಅಧಿಕಾರಿಗೆ ಹೇಳಿದರೆ ಲಹರಿಯ ವಿಷಯಗಳೆಲ್ಲಾ ಆ ವ್ಯಕ್ತಿಯಿಂದ ತಿಳಿಯಬಹುದು. ಅಧಿಕಾರಿಕೆ ಪ್ರಮೋಷನ್! ಮನಸ್ಸು ಹುಳಿ ಹುಟ್ಟಿಸಿತು. ಆ ವಿಚಾರಕ್ಕೆ ತೆರೆಯೆಳೆದ ಅಧಿಕಾರಿಯ ಮುಂದೆ ನಿಂತವನು.

'ಎಲ್ಹೋಗಿದ್ದೆ ಈ ಕತ್ತಲೆಯಲ್ಲಿ?' ಪರೀಕ್ಷಾ ನೋಟವಿತ್ತು ಇನ್ಸ್‌ಪೆಕ್ಟರ್ ರಾಜಧಾನಿಯ ಮುಖದಲ್ಲಿ.

'ಅದು, ಇಲ್ಲೇ ಮರಳು ದಿಣ್ಣೆಯ ಮೇಲೆ ನಡೆದಾಡುತ್ತಿದ್ದೆ. ಅದಿನ್ನೆಷ್ಟು ಬಾರಿ ಈ ದಿಣ್ಣೆಯ ಮೇಲೆ ನಡೆಯಬೇಕೋ? ಅದಕ್ಕೆ ರಿಹರ್ಸಲ್ ನಡೆಸ್ತಿದ್ದೆ' ನಾಟಕೀಯವಾಗಿ ಹೇಳಿ ನಿಟ್ಟುಸಿರಿಟ್ಟ.

'ಅಂದ್ರೆ?'

'ಅಂದ್ರೆ, ಲಹರಿಯ ಕೇಸು ಮುಗಿಯುವವರೆಗೆ ನಾವು ಬಂಡೆಗೆ ಬರಬೇಕಾಗಿರುವುದು ಅನಿವಾರ್ಯ. ಜೊತೆಗೆ ಪಾಂಬು ಕೂಡ ನಮಗೆ ಸಿಗೋದು ಇಲ್ಲಿಯೆ ತಾನೆ? ಸದ್ಯಕ್ಕಂತು ಈ ಮರಳು ದಿಣ್ಣೆಯ ಓಡಾಟ ತಪ್ಪಿದ್ದಲ್ಲ'.

ಇನ್ಸ್‌ಪೆಕ್ಟರ್ ಕುಹಕ ನಗು ನಕ್ಕ.

'ನಿನ್ನದು ಬೋದಾಳ ಮೆದುಳು. ಅದಕ್ಕೆ ಸಾಣೆ ಹಿಡಿಯದಿದ್ದರೆ ಕೆಲಸ ಮಾಡೋದು ಕಷ್ಟ. ನಾಳೆಯೇ ಅದನ್ನು ರಿಪೇರಿ ಮಾಡಿಸಿಕೊಂಡು ಬಾ'

'ಸಾರ್, ನೀವು ಹಾಗ್ಯಾಕಂತೀರಿ. ನೋಡ್ತಾ ಇರಿ, ಈ ಕೇಸ್‌ನ ಮುಖ್ಯ ಸಾಕ್ಷಿಯನ್ನು ನಿಮ್ಮ ಮುಂದೆ ನಿಲ್ಲಿಸ್ತೀನಿ' ಆವೇಶವಿತ್ತು ಮಾತಿನಲ್ಲಿ.

'ಸಾಕ್ಷೀನಾ? ಲಹರಿಯ ಕಣ್ಮರೆಯ ಬಗ್ಗೆಯೇ ಮಾಹಿತಿ ಸಿಕ್ಕಿಲ್ಲ, ಇನ್ನು ಸಾಕ್ಷಿಯನ್ನು ತಂದು ನಿಲ್ಲಿಸ್ತೀನಿ ಅಂತಿಯಾ. ಒಳ್ಳೆ ಜೋಕ್ ಆಯ್ತು ಇದು'

ಪಿಸಿ ಮುಖ ಹುಳ್ಳಗಾಯಿತು. ಅಧಿಕಾರಿಗೆ ತನ್ನ ಮೇಲೆ ಭರವಸೆಯೇ ಇಲ್ಲ. ಸುಮ್ಮನೆ ತನ್ನನ್ನು ಕೆಣಕುತ್ತಿದ್ದಾನೆ. ಅವನಿಗೆ ತಾನು ಕಂಡ ಸತ್ಯವನ್ನು ಹೇಳಿ ಬಿಡಲೇ ಅನಿಸಿತು.

'ಮೊದಲು ಗಾಡಿ ಹತ್ತು. ಆಮೇಲೆ ಉಳಿದದ್ದು'

ಸಾರಂಗ ಅಧಿಕಾರಿಯ ಬೈಕೇರಿದ. ಸೆಲ್ಫ್ ಒತ್ತಿದ ಇನ್ಸ್‌ಪೆಕ್ಟರ್. ಬೈಕ್ ಸದ್ದು ಹೊರಡಿಸಿತು.

'ಸಾರ್' ಪಿಸಿ ರಾಗವೆಳೆದ.

'ಏನು?' ಅಸಹನೆಯಿತ್ತು ಇನ್ಸ್‌ಪೆಕ್ಟರ್‌ನ ದನಿಯಲ್ಲಿ.

'ನಾನು ಈಗ ಅವನನ್ನು ನೋಡ್ದೆ' ಮಾತಿನಲ್ಲಿ ಅಸ್ಪಷ್ಟತೆ ಇತ್ತು. ಬೈಕ್ ವೇಗ ಪಡೆದಂತೆ ಸದ್ದು ಹೊರಡಿಸಿತು. ತಕ್ಷಣವೆ ಕ್ಲಚ್, ಬ್ರೇಕ್ ಒತ್ತಿದಂತೆ ಸದ್ದು ಮಾಡಿತು ಬೈಕ್.

'ಯಾರನ್ನು ನೋಡ್ದೆ?' ಇನ್ಸ್‌ಪೆಕ್ಟರ್‌ನ ದನಿಯಲ್ಲಿ ಕುತೂಹಲವಿತ್ತು. ಅಧಿಕಾರಿಯ ಕುತೂಹಲವೇ ಪಿಸಿಯನ್ನು ಉತ್ತೇಜಿಸಿತು.

'ಲಹರಿಗೆ ಸಂಬಂಧಪಟ್ಟ ಸಾಕ್ಷಿ'

'ಕೆಳಗಿಳಿ' ಬೈಕ್‌ನ ಇಂಜಿನ್ ನಿಷ್ಕ್ರಿಯವಾಯಿತು. ಪಿಸಿ ಕೆಳಗಿಳಿದ. ರಾಜಧಾನಿಯ ಮುಖದಲ್ಲಿ ಗೊಂದಲದ ಜೊತೆಗೆ ಕುತೂಹಲ.

'ನೀನು ಯಾವ ಸಾಕ್ಷಿಯ ಬಗ್ಗೆ ಹೇಳುತ್ತಿರುವೆ?' ಪ್ರಶ್ನೆ ಗೊಂದಲದ್ದಾಗಿತ್ತು.

'ಅದೇ ಲಹರಿಗೆ ಸಂಬಂಧಪಟ್ಟದ್ದು... ಸಾರ್'

(ಸಶೇಷ)

## ಗಾಯ

ಕಾಲಿಗೆ ಆದ ಗಾಯ
ಹೇಗೆ ನಡೆಯಬೇಕೆಂದು
ಕಲಿಸುತ್ತದೆ
ಮನಸ್ಸಿಗೆ ಆದ ಗಾಯ
ಹೇಗೆ ಬದುಕಬೇಕೆಂದು
ಕಲಿಸುತ್ತದೆ

★ ವಿ. ಹೇಮಂತಕುಮಾರ

